ಆರ್‌ಬಿಐ/2004/42

ಡಿಬಿಒಡಿ ಸಂಖ್ಯೆ. ಬಿಪಿ.ಬಿಸಿ.66/21.04.117/2003–2004 ಫೆಬ್ರವರಿ 05, 2004
ಎಲ್ಲಾ ಸಾರ್ವಜನಿಕ ವಲಯ ಬ್ಯಾಂಕುಗಳ
ಅಧ್ಯಕ್ಷರು, ಹಾಗೂ ವ್ಯವಸ್ಥಾಪಕ ನಿರ್ದೇಶಕರುಗಳಿಗೆ.

ಮಾನ್ಯರೇ,

**ಸಾರ್ವಜನಿಕ ವಲಯ ಬ್ಯಾಂಕುಗಳ 10 ಕೋಟಿ ರೂಪಾಯಿಗಳವರೆಗಿನ ಬಹುಕಾಲದ ಅನುತ್ಪಾದಕ ಆಸ್ತಿಗಳ ಬಗ್ಗೆ ರಾಜಿ ಇತ್ಯರ್ಥಕ್ಕಾಗಿ ಪರಿಷ್ಕೃತ ಮಾರ್ಗಸೂಚಿಗಳು**

10 ಕೋಟಿ ರೂಪಾಯಿಗಳವರೆಗಿನ **ಅನುತ್ಪಾದಕ** ಆಸ್ತಿಗಳ ಇತ್ಯರ್ಥಕ್ಕಾಗಿ ಸಲ್ಲಿಸಲಾದ ಅರ್ಜಿಗಳ ಪರಿಶೀಲನೆಗಾಗಿ ಸಮಯ ಮಿತಿಯನ್ನು 31ನೇ ಅಕ್ಟೋಬರ್ 2003 ರಿಂದ 31ನೇ ಡಿಸೆಂಬರ್ 2003ಕ್ಕೆ ವಿಸ್ತರಿಸಿ ಹೊರಡಿಸಿರುವ ಮೇ 23, 2003ನೇ ದಿನಾಂಕ ನಮ್ಮ ಸುತ್ತೋಲೆ ಡಿಬಿಒಡಿ ಸಂಖ್ಯೆ. ಬಿಪಿ.ಬಿಸಿ.108/21.04.117/2002–03ನ್ನು ದಯವಿಟ್ಟು ನೋಡಿ.

2. ಮಾರ್ಗಸೂಚಿಗಳ ಕಾರ್ಯರೂಪಕ್ಕೆ ಸಮಯ ಮಿತಿಯನ್ನು ವಿಸ್ತರಿಸುವ ಕುರಿತು ಸ್ವೀಕರಿಸಿದ ಕೋರಿಕೆಗಳ ಹಿನ್ನೆಲೆಯಲ್ಲಿ ಭಾರತ ಸರ್ಕಾರದೊಂದಿಗೆ ಚರ್ಚಿಸಿ, 10 ಕೋಟಿ ರೂಪಾಯಿಗಳವರೆಗಿನ ಸಾರ್ವಜನಿಕ ವಲಯ ಬ್ಯಾಂಕುಗಳ ಬಹುಕಾಲದ **ಅನುತ್ಪಾದಕ** ಆಸ್ತಿಗಳ ಬಗ್ಗೆ ಒಂದು ಬಾರಿಯ ಇತ್ಯರ್ಥಕ್ಕಾಗಿ ಅರ್ಜಿಗಳನ್ನು 31ನೇ ಜುಲೈ 2004ರವರೆಗೆ ಸ್ವೀಕರಿಸಬೇಕೆಂದು ನಿರ್ಧರಿಸಲಾಗಿದೆ. ಪರಿಣಾಮವಾಗಿ, 31 ನೇ ಜುಲೈ 2004ರವರೆಗೆ ಸ್ವೀಕರಿಸಿದ ಅರ್ಜಿಗಳ ಪರಿಶೀಲನೆಯ ಕೊನೆಯ ದಿನಾಂಕವನ್ನು ಸಹ 31ನೇ ಅಕ್ಟೋಬರ್ 2004ಕ್ಕೆ ವಿಸ್ತರಿಸಲಾಗುವುದು.

3. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ನಂಬುಗೆಯ

ಸಹಿ/–
(ಸಿ.ಆರ್. ಮುರುಳೀಧರನ್)
ಮುಖ್ಯ ಪ್ರಧಾನ ವ್ಯವಸ್ಥಾಪಕ–ಪ್ರಭಾರ.